ಅ) ಹಾಗಿದ್ದಲ್ಲಿ, ಈ ಅನಾನುಕೂಲತೆಗಳನ್ನು ನಿವಾರಿಸಲು ಸರ್ಕಾರವು ಪರ್ಯಾಯ ಯೋಜನೆ ಮಾಡಿದೆಯೇ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಹೌದು. ಗಮನಕ್ಕೆ ಬಂದಿದೆ.

ಆ) ಆಲೂರು ತಾಲ್ಲೂಕಿನಲ್ಲಿ ಮಳೆಗಾಲದಲ್ಲಿ ಹಾನಿಗೊಳಗಾಗಿದ್ದ ಎಲ್ಲಾ ಕಂಬಗಳನ್ನು ಬದಲಾಯಿಸಲಾಗಿದ್ದು, ವಿದ್ಯುತ್ ಸರಬರಾಜನ್ನು ಪುನರ್ ವ್ಯವಸ್ಥೆಗೊಳಿಸಲಾಗಿದೆ. ಸಕಲೇಶಪುರ ತಾಲ್ಲೂಕಿನಲ್ಲಿ ಕೆಲವೇ ಕೆಲವು ಕಂಬಗಳನ್ನು ಬದಲಾಯಿಸಬೇಕಾಗಿದ್ದು, ಆದಷ್ಟು ಜಾಗ್ರತೆ ಈ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಸಕಲೇಶಪುರ ಹೊಸದಾಗಿ ಮುನ್ಸೀಫ್ ಕೋರ್ಟ್ ಕಟ್ಟಡ ನಿರ್ಮಾಣ

3352 - ಶ್ರೀ ಬಿ. ಆರ್. ಗುರುದೇವ (ಸಕಲೇಶಪುರ) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಪಟ್ಟಣದಲ್ಲಿರುವ ಮುನ್ಸೀಫ್ ಕೋರ್ಟಿಗೆ ಸ್ವಂತ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೊಸದಾಗಿ ಕಟ್ಟಡ ನಿರ್ಮಾಣ ಮಾಡುವ ಯೋಜನೆ ಸರ್ಕಾರಕ್ಕಿದೆಯೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ(ಕಾನೂನು ಸಚಿವರು) :

ಅ) ಹೌದು.

ಆ) ಸದ್ಯಕ್ಕೆ ಸರ್ಕಾರದ ಹತ್ತಿರ ಸಕಲೇಶಪುರದಲ್ಲಿ ಹೊಸ ಕೋರ್ಟ್ ಕಟ್ಟಡವನ್ನು ಕಟ್ಟಲು ಯಾವ ಪ್ರಸ್ತಾವನೆಯು ಇಲ್ಲ.

ಕರ್ನಾಟಕ ರಾಜ್ಯದಲ್ಲಿ ಗ್ರಾಹಕರಿಂದ ಬರಬೇಕಾದ ವಿದ್ಯುಚ್ಛಕ್ತಿ ಬಾಕಿ ಹಣ

3349 -ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಗ್ರಾಹಕರಿಂದ ಸರ್ಕಾರಕ್ಕೆ ಬರಬೇಕಾದ ವಿದ್ಯುಚ್ಛಕ್ತಿ ಬಾಕಿ ಹಣ ಎಷ್ಟು?

ಆ) ಇದರಲ್ಲಿ ಕೈಗಾರಿಕಾ ವಿಭಾಗದಿಂದ ಮತ್ತು ರೈತರ ಕಡೆಯಿಂದ ಬರಬೇಕಾದ ಬಾಕಿ ಹಣ ಎಷ್ಟು?

ಶ್ರೀ ಎಂ ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) 1991 ರ ಮಾರ್ಚ್ ಅಂತ್ಯದವರೆಗಿರುವಂತೆ ಡಿಮ್ಯಾಂಡ್ ವಸೂಲಿ ಮತ್ತು ಬಾಕಿ ತಃಖ್ತೆ ಪ್ರಕಾರ ಎಲ್ಲಾ ಬಾಬುಗಳಿಂದ ಮಾರ್ಚು ಡಿಮಾಂಡು ಸೇರಿ 433.94 ಕೋಟಿ ರೂಪಾಯಿಗಳ ವಿದ್ಯುಚ್ಛಕ್ತಿ ಬಾಕಿಯಿರುತ್ತದೆ.

ಆ) 1991 ರ ಮಾರ್ಚ್ ತಿಂಗಳ ಅಂತ್ಯಕ್ಕೆ ಎಲ್ಲಾ ವಿಧವಾದ ಕೈಗಾರಿಕೆಗಳಿಂದ 215.23 ಕೋಟಿ ರೂಪಾಯಿಗಳು ಮತ್ತು ರೈತರಿಂದ ಪಂಪುಸೆಟ್ಟುಗಳ ವಿದ್ಯುಚ್ಛಕ್ತಿ ಬಾಕಿ ಹಣ 52.63 ಕೋಟಿ ರೂಪಾಯಿಗಳು.

ಯಲ್ಲಾಪುರ ಮತ್ತು ಜೋಯಿಡಾದಲ್ಲಿ ಬಸ್ ನಿಲ್ದಾಣಗಳ ಬಗ್ಗೆ ನಿರ್ಮಾಣ

3453 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಟ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?